Regd No M 1299 Sri ತಾ! 15—11—51

SATYAVADI = 35th Year



ಸ್ಥಾಪಕರು- ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಗುಜರಾತಿನಲ್ಲಿ ರಾಮರಾಜ್ಯ ಪರಿಷತ್‌ನ ಹೆಚ್ಚು ಉಮೇದುವಾರರು

[ಸ್ವಂ ಸು ತಂತಿ] ಅಹಮದಾಬಾದ್, ಆ 14

ಶ್ರೀ ಚಂದ್ರವಾಳೇಶ್ವರಸ್ವಾಮಿ ಸಂಸ್ಥಾಪನೆ ಗೌರವಾರ್ಥವಾಗಿ ಶ್ರೀ ದ್ವಾರಕಾ ಜಗದ್ಗುರು ಶಂಕರಾಚಾರ್ಯರವರು ಅನೇಕ ಕಾರ್ಯಕ್ರಮಗಳನ್ನಿಟ್ಟುಕೊಂಡಿರುವರು ಸ್ಫೂರ್ತಿದಾಯಕವಾದ ಉಪನ್ಯಾಸಗಳನ್ನು ಮಾಡುತ್ತಿರುವರು.

ಶ್ರೀ ಶ್ರೀ ಗಳವರು ಚಂದ್ರವಾಳೇಶ್ವರ ವಿಜಯ ಯಾತ್ರೆ ಮೇಲೆ ದ್ವಾರಕಾಕ್ಕೆ ತೆರಳುವ ಬಗ್ಗೆ, ವೀರಗಾಂಗೆ ತಾ|| 18 ರಲ್ಲೂ, ವಾಧ್ವಾನಕ್ಕೆ ತಾ|| 22 ರಲ್ಲೂ, ರಾಜಕೋಟೆಗೆ ತಾ|| 25 ರಲ್ಲೂ ಆಗಮಿಸುವರು.

ಮಹಾ ಚುನಾವಣೆಗೆ ರಾಮರಾಜ್ಯ ಪರಿಷತ ಗುಜರಾತಿನಲ್ಲಿ ಅಧಿಕವಾಗಿ ಉಮೇದವಾರನ್ನು ನಿಲ್ಲಿಸುವದು.

ಸರ್ಕಾರಿ ಪ್ರಕಟಣೆ

ಜನನ ಮರಣದ ಸರ್ಟಿಫಿಕೇಟ್ ಬೇಕೆಂದು ಜನನ ಮರಣದ ರಿಜಿಸ್ಟ್ರಾರ್ ಜನರಲ್‌ರವರಿಗೆ ಅರ್ಜಿ ಬರೆದುಕೊಳ್ಳುವ ವಿಚಾರದಲ್ಲಿ ಸಾರ್ವಜನಿಕರು ತಿಳಿಯಬೇಕಾದ ಅಂಶವನ್ನು ಮೈಸೂರು ಸರ್ಕಾರ ಪ್ರಕಟಿಸಿದೆ

ಧಾನ್ಯ ಸಾಗಾಣಿಕೆ ಅನುಮತಿಯನ್ನು ಸರ್ಕಾರ ಹಿಂತೆಗೆದುಕೊಂಡಿತು

ಈ ವರ್ಷದ ಮುಗ್ಯ ಭಾಗದಲ್ಲಿ ಭತ್ತದ ಸುಗ್ಗಿ ಆರಂಭವಾಗುವದರಿಂದ ರೇಷ್ ಇಲ್ಲದ ಜಾಯ ಕಡೆಯಿಂದ ರೇಷ್ ಇಲ್ಲದ ಮತ್ತೊಂದು ಕಡೆಗೆ 30 ಸೇರಿಸಷ್ಟು ಭತ್ತ ಅಥವಾ ಅಕ್ಕಿ ಸಾಗಿಸಲು ಮೈಸೂರು ಸರ್ಕಾರ ಕೊಟ್ಟಿದ್ದ ಅನುಮತಿಯನ್ನು ಇಂದಿನಿಂದ ಮೈಸೂರು ಸರ್ಕಾರ ವಾಪಸು ಪಡೆದಿದೆ

ಎಲ್ಲ ವಿರೋಧ ಪಕ್ಷಗಳ ಸಂಘಟನೆ ಅಗತ್ಯ

ಗೋಪಾಲರವರ ಹೇಳಿಕೆ

ಅಖಿಲ ಭಾರತ ಕಮ್ಯುನಿಸ್ಟ್ ಪಕ್ಷದ ಧುರೀಣ ಶ್ರೀ ಎ ಕೆ. ಗೋಪಾಲನ್‌ರವರು ನಿನ್ನೆ ಸಂಜೆ ಮೈಸೂರು ರಂಗಾಚಾರ್ಲು ಪುಂಭವನ ಮೈದಾನದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ : ಮಹಾ ಚುನಾವಣೆಯಲ್ಲಿ ಕಾಂಗ್ರೆಸ್‌ನ್ನು ಪರಾಜಯಗೊಳಿಸಲೇ ಬೇಕು ಎಂದು ತಿಳಿಸಿದರು. ಕಾಂಗ್ರೆಸ್‌ನ್ನು ಪರಾಜಯಗೊಳಿಸುವ ಉದ್ದೇಶದಿಂದ ಭಾರತದಲ್ಲಿರುವ ಎಲ್ಲ ವಿರೋಧ ಪಕ್ಷಗಳು ಒಮ್ಮತವಿರುವ ಅಭಿಪ್ರಾಯಗಳಲ್ಲಿ ಒಟ್ಟುಗೂಡಿ, ಭಿನ್ನಾಭಿಪ್ರಾಯ ವಿರುವ ವಿಷಯಗಳಲ್ಲಿ ಸಂಸ್ಪರ ಕಲೆತು ಪರಿಹರಿಸಿಕೊಳ್ಳುವ, ಜನತೆ ಈ ನಿಟ್ಟಿನಲ್ಲಿ ಧುರೀಣರ ಮೇಲೆ ಒತ್ತಾಯ ತರಬೇಕಾದ ಅವಶ್ಯ ಎಂದು ಶ್ರೀ ಗೋಪಾಲನ್ ತಿಳಿಸಿದರು. ಪುನಃ ಕಾಂಗ್ರೆಸ್ ಆಡಳಿತಕ್ಕೆ ಬಂದಲ್ಲಿ ಅಪಾರ ಅಭಾವ ಮತ್ತೂ ಹೆಚ್ಚಾದೀತೆಂದು ಶ್ರೀ ಗೋಪಾಲನ್ ತಿಳಿಸಿದರು.

'ಹಸಿ' ವಿನ ಸಚಿವ ಶ್ರೀ ಮರ್ಫಿಯವರು ವನಮಹೋತ್ಸವದಿಂದ, ಹೆಚ್ಚು ಆಹಾರ ಬೆಳೆಯುವ ಪ್ರಚಾರದಿಂದ ಆಹಾರದ ಬೆಲೆ ಹೆಚ್ಚುವದಿಲ್ಲ. ಭೂಮಿಯಿಂದ ಉತ್ಪನ್ನ ಹೆಚ್ಚು ಕಂಡರೆ ರೈತನ ಬೆಳೆಯನ್ನು ಹೆಚ್ಚು ಬೆಳೆಯುತ್ತಾನೆ. ಇದಕ್ಕೆ ಭೂ ಸುಧಾರಣೆ ಅಗತ್ಯ ಎಂದು ಶ್ರೀ ಗೋಪಾಲನ್ ತಿಳಿಸಿದರು. ರೈತನಿಂದ ಧಾನ್ಯ ಶೇಖರಣೆ ನಿಲ್ಲಬೇಕು ಎಂದು ಅವರು ತಿಳಿಸಿದರು

ಕರಾಚಿ ಕಾಂಗ್ರೆಸಿನ ಠರಾಪಸಂತೆ ದೇಶದಲ್ಲಿ ಅಧಿಕ ಎಂದರೆ ರೂ. 500 ಕನಿಷ್ಠ ಎಂದರೆ ರೂ 35 ಎಂದು ನಿಗದಿಯಾಗಿತ್ತು. ಮದರಾಸಿನ ಮಂತ್ರಿಗಳು 1 ವರೆ ಸಹಸ್ರ ತೆಗೆದುಕೊಳ್ಳುತ್ತಿದ್ದಾರೆ. ಸಾಮಾನ್ಯರಿಗೆ ಸಂಬಳ ಸಾಲದು ಅಂಚ ಹೆಚ್ಚಿದೆ ಎಂದು ಶ್ರೀ ಗೋಪಾಲನ್ ತಿಳಿಸಿದರು

ಕೇಂದ್ರ ಕಾಂಗ್ರೆಸ್ ಚುನಾವಣಾ ಸಮಿತಿ ಶಿಸ್ತಿನಕ್ರಮ ಕೈಗೊಳ್ಳುವುದು

ದಿವ್ಯವಾಣಿ

ಸ್ವಾತಂತ್ರ್ಯದ ಅರ್ಥವನ್ನು ನೀನು ಅದನ್ನು ಕಳೆದುಕೊಳ್ಳುವ ವರಿಗೆ ತಿಳಿಯಲಾರೆ

ವಿನೋಬಾ ವಶಕ್ಕೆ ಭೂಮಿ

ಆಚಾರ್ಯ ವಿನೋಬಾ ಭಾವೆ ವಶಕ್ಕೆ ಈ ವರಿಗೆ ದೆಹಲಿಯಲ್ಲಿ ಮಧ್ಯವರ್ಗ ಮತ್ತು ಜಮೀಂದಾರರಿಂದ ಭೂಹೀನರಿಗೆ ಕೊಡಲು ನಿನ್ನೆ ವರಿಗೆ ಒಟ್ಟು ಬಂದು ಸಹಸ್ರ ಎಕರೆ ಭೂಮಿ ಕಾಣಿಕೆ ಬಂದಿದೆ

ಸ್ಟಾಲಿನ್ನರ ಶುಭಾಶಯ

ಪಂಡಿತ ನೆಹರುವಿಗೆ ನಿನ್ನೆ 62 ವರ್ಷ ಗಳು ತುಂಬಿದವು ರಷ್ಯದ ಸ್ಟಾಲಿನ್ನರು ಪಂ|| ನೆಹರುವಿಗೆ ಶುಭಾಶಯ ಕಳಿಸಿರುವರು

ಪ್ರಧಾನಿಗಳ ಮುಂದಾಳ್ತನದಲ್ಲಿ

ವೈದ್ಯಕೀಯ ಸಲಹೆಯನ್ನು ತಿರಸ್ಕರಿಸಿ ನಿನ್ನೆ ಕೈರೋವಿನಲ್ಲಿ 72 ವಯಸ್ಸಿನ ಪ್ರಧಾನ ಸಹಾಸಪಾಷಾರವರು ಐದು ಲಕ್ಷ ಮುದಿಯಸ್ಸು ಬ್ರಿಟಿಷರ ವಿರುದ್ಧ ಸಮರ ದಿನಾಚರಣೆ ಸಂಬಂಧದಲ್ಲಿ ನೆರವಣಿಗೆ ಕರೆದೊಯ್ದರು

ಸಾವು — ನೋವು

ಕೊಳವಿಗಳನ್ನು ಕದಿಯುತ್ತಿದ್ದ ಗುಂಪೊಂದರ ಮೇಲೆ ಸೊಯುಸ್ ಪ್ರದೇಶದ ಸನಿಹದಲ್ಲಿ ನಿನ್ನೆ ಬ್ರಿಟಿಷರು ಗುಂಡು ಹಾರಿಸಲು ಓರ್ವ ಈಜಿಪ್ಟಿನವನು ಸತ್ತು ಮತ್ತೋರ್ವ ತೀವ್ರ ಗಾಯಗೊಂಡ ವರದಿ ಇಸ್ಮೇಲಿಯದಿಂದ ಬಂದಿದೆ

ಶ್ರೀ ದಾಸಪ್ಪನವ್ರಿಗೆ ವಿರುದ್ಧ

ಪ್ರಜಾಮತ ಸಂವಾದಕ ಶ್ರೀ ಗುರು ಪಾದಸ್ವಾಮಿಯವರು ಪಾರ್ಲಿಮೆಂಟಿನ ಉಮೇದುವಾರರಾದ ಸಚಿವ ಶ್ರೀ ದಾಸಪ್ಪನವರನ್ನು ಪ್ರತಿಸ್ಪರ್ಧಿಸುವರು

ಆಂಧ್ರ ಪ್ರಾಂತ್ಯ

ಮಹಾ ಚುನಾವಣೆ ಅನಂತರ ಆಂಧ್ರ ಪ್ರಾಂತದರಚನೆ ಆಶಯ ಪಂಡಿತ ನೆಹರುವಿಗೆ ಇದೆ ಎಂದು ಪಾರ್ಲಿಮೆಂಟಿನ ಉಪಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರರು ಕಳೆದ ದಿನ ವಿಜಯವಾಡಾದಲ್ಲಿ ತಿಳಿಸಿದರು

ಕೇಂದ್ರ ಚುನಾವಣಾ ಸಮಿತಿ ಅಜ್ಞೆ ಭಂಗ ಮಾಡಿದ್ದಕ್ಕೆ ಪಂಜಾಬಿನ 30—40 ಮಂದಿ ಹೊಲೆ ಶಿಸ್ತುಭಂಗ ಕ್ರಮ ಕೈಗೊಳ್ಳಬಹುದೆಂದು ದೆಹಲಿ ವಾರ್ತೆ ಇದರಲ್ಲಿ ಡಾ|| ಗೋಪೀಚಂದಭಾರ್ಗವಾ ಮುಂತಾದವರು ಇದ್ದಾರೆ

ವಾರ್ತೆಗಳು

ಈ ದಿನದಿಂದ ಶೇ 3 ರಿಂದ 3 ವರೆ ವರಿಗೆ ಬ್ಯಾಂಕ್ ದರವನ್ನು ಭಾರತದ ರಿಜರ್ವ್ ಬ್ಯಾಂಕ್ ಹೆಚ್ಚಿಸಿರುವದಾಗಿ ದೆಹಲಿ ವಾರ್ತೆ

ಂ ಂ

ಸಮರ ವಿರುದ್ಧ ಘೋಷಣೆ ರಚನೆಗೆ ನಾಲ್ಕು ಮಹಾರಾಜ್ಯಗಳ ವಿದೇಶ ಸಚಿವರ ಸಭೆಯನ್ನು ನಿನ್ನೆ ಪೇರಿಸ್ಸಿನಲ್ಲಿ ವಿಶ್ವಸಂಸ್ಥೆಯ ಭಾರತ ಪ್ರತಿನಿಧಿ ಶ್ರೀ ಬಿ ಎನ್ ರಾಯರು ಕರೆದಿದ್ದರು

ಂ ಂ

ಕೊರಿಯ ಕಮ್ಯುನಿಸ್ಟರು ಸಮರ ಸಮಾಪ್ತಿಗೆ ಕಾತುರವಿರುವರೆಂದು ಮುನ್ಸಾನಿನ ವಾರ್ತೆ

ಂ ಂ

ಜಗತ್ತಿನ ಶಾಂತಿಗಾಗಿ ಭಾರತದ ಸಂಗಡ ಚೀಣ ದುಡಿವದೆಂದು ಚೀಣ ನಿಯೋಗದವರು ಬೊಂಬಾಯಿಸಲ್ಲಿ ಕಳೆದ ದಿವಸ ತಿಳಿಸಿದರು

ಂ ಂ

ಬಿಹಾರಿನಲ್ಲಿರುವ ತಮ್ಮ ಭೂಮಿಯಲ್ಲಿ ಒಡವರಿಗಾಗಿ ಯಾವುದು ಬೇಕಾದರೂ ಅರಿಸಲು ವಿನೋಬಭಾವೆಗೆ ಡಾ|| ರಾಜೇಂದ್ರಪ್ರಸಾದರು ತಿಳಿಸಿದ್ದಾರೆ

ಂ ಂ

ಪಾಕಿಸ್ತಾನ ವಿರುದ್ಧ ಜಳವಳದ ನಾಯಕ ಶ್ರೀ ತಟ್ಟೈಯವರು ಪಂಡಿತ ನೆಹರುವಿಗೆ ಚುನಾವಣೆ ಪ್ರತಿಸ್ಪರ್ಧಿ ಆಗುವರು

ಂ ಂ

ಬ್ರಿಟಿಷ್ ಹೈಕಮೀಷನರ ಕಚೇರಿ ಎದುರು ಈಜಿಪ್ಟಿನ ದಂವಾಗಿ ಕಳೆದ ದಿನ ಪಾಕ್ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದರೆಂದು ಕರಾಚಿ ವಾರ್ತೆ

ಶ್ರೀ ರೆಡ್ಡಿಗೆ ವಿರೋಧ

ಕಾಂಗ್ರೆಸಿಗೆ ರಾಜೀನಾಮೆ ಬರೆದ ಶ್ರೀ ಕೆ ಪಟ್ಟಾಭಿರಾಮನ್‌ರನ್ನು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ವಿರುದ್ಧ ನಿಲ್ಲಿಸುವ ವಾರ್ತೆ ಇದೆ ಅವರು ಕೆ ಎಂ ಪಿ ಪಕ್ಷಕ್ಕೆ ಸೇರುವ ವಾರ್ತೆ ಇದೆ

ಒಂದು ನಿಮಿಷ ಮಾತ್ರದಲ್ಲಿ

ಒಂದೇ ಒಂದು ನಿಮಿಷದಲ್ಲಿ ಪ್ರಪಂಚದಲ್ಲಿ ಏನಾಗುತ್ತದೆಂಬುದನ್ನರಿತಿರುವಿರಾ ? ನೋಡಿ.

1 90 ಮಂದಿ ಮಕ್ಕಳು ಹುಟ್ಟುವರು.

2 76 ಮಂದಿ ಸಾಯುವರು.

3 ಹೊಗೆ ಸೇದುವವರು (ಇಡೀ ಪ್ರಪಂಚದಲ್ಲಿರುವವರೆಲ್ಲರೂ ಸೇರಿ) 3 ಟನ್ನು ತಂಬಾಕನ್ನು ಸುಟ್ಟು ಬೂದಿ ಮಾಡುವರು.

4 180 ಕೋಟಿ ಮಂದಿ ಅರುಣೋದಯಕ್ಕಿಂತ ಮೊದಲೇ ಅಥವಾ ಕಾಫಿ ಕಪ್ಪನ್ನು ಕುಡಿಯುವರು.

5 2 ಸಾವಿರ ಟನ್ ಇಜ್ಜಲು ಉಪಯೋಗಿಸಲ್ಪಡುವುದು.

6 2 ಸಾವಿರ ಬ್ಯಾರೆಲ್ಲು ಎಂಜಿನ್ ಖರ್ಚಾಗುವುದು

7 1 ಲಕ್ಷ ಪೌಂಡು ಮಾಂಸವು ಉಪಯೋಗಿಸಲ್ಪಡುವುದು.

8 ಐವತ್ತು ಸಾವಿರ ಪೊಟ್ಟಣಗಳು ಖರ್ಚಾಗುವವು.

9 ಐದು ಲಕ್ಷ ಬ್ರೆಡ್ಡುಗಳು ತಿನ್ನಲ್ಪಡುವು

10 ಒಂದು ಸೆಕೆಂಡಿಗೆ 50 ಟನ್ನುಗಳ ಉಪ್ಪು ತಿನ್ನಲ್ಪಡುವುದು.

11 ನಿಮಿಷಕ್ಕೆ ಒಂದು ಸಾವಿರ ಟನ್ನು ಸಕ್ಕರೆಯು ಉಪಯೋಗಿಸಲ್ಪಡುವುದು.

12 ಏಳೂವರೆ ಲಕ್ಷ ಪೌಂಡುಗಳ ಆಲೂಗೆಡ್ಡೆಯು ಪೊಟ್ಟಿಗಳೊಳಕ್ಕೆ ಹೋಗುವುದು.

13 ಎರಡು ಸಾವಿರ ಮಂದಿ ತಪ್ಪಿ ಶಸ್ತ್ರರು ಹಿಡಿಯಲ್ಪಡುವರು

14 ಮೂರೂವರೆ ಸಾವಿರ ಕ್ರೂರ ಕೃತ್ಯಗಳು ನಡೆಯುವುವು

ಅಪೇರ—

9–11–51 ರಿಂದ

ರಾಮ ವಿವಾಹ

(ಹಿಂದಿ)

ಪಾತ್ರ– ಪೃಥ್ವಿರಾಜ್, ಉಮಾಕಾಂತ್

ಶೋಭನಸಮರ್ಥ್ } ದಿನ 3 ಆಟಗಳು

ಬೆಳಗಿನ ಪ್ರದರ್ಶನ 16–11–51 ರಿಂದ

ಮು ಜ್ರಿ ಮ್ (ಹಿಂದಿ)

16–11–51 ರಿಂದ ಅಮೋಘ ಆರಂಭ

ಮೋತೀಲಾಲ್ ಶ್ರೀಲಕ್ಷ್ಮಿ

.... ಚಿತ್ರಮಂದಿರಗಳಲ್ಲಿ ....

ಜ್ಞಾನಾಂಬಿಕಾರವರ ಅತ್ಯಮೋಘ ತೆಲುಗು ಚಿತ್ರ

ಮಂತ್ರದಂಡಂ

ಆಶ್ಚರ್ಯ ದೃಶ್ಯಗಳಿಂದಲೂ, ರೋಮಾಂಚಕ ಸನ್ನಿವೇಶಗಳಿಂದಲೂ ನಿಮ್ಮನ್ನು ಮಂತ್ರಮುಗ್ಧಗೊಳಿಸುವ ಅಮೋಘ ಚಿತ್ರ

ಭೂಮಿಕೆಯಲ್ಲಿ— * ನಾಗೇಶ್ವರರಾವ್ * ಸಿ ಎಸ್ ಆರ್ * ಲಿಂಗಮೂರ್ತಿ * ಶಿವರಾವ್
* ಶ್ರೀರಂಜಿನಿ * ಜಯಮ್ಮ * ಬಾಲಸರಸ್ವತಿ * ಕೃಷ್ಣಕುಮಾರಿ

— ಪ್ರತಿ ದಿನ 3 ಆಟಗಳು —

ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು 3 ವಾರಗಳು ಮುನ್ನಾಮಾಡಿರುತ್ತೆ.

— R. V. PICTURES Release

ಮೈಸೂರು ಉಕ್ಕನ್ನು ಬಳಸಿ

ಮೃದುವಾದ ಉಕ್ಕಿನ ಪಟ್ಟಿಗಳು,

ಮೈಸೂರು

* ದುಂಡು,
* ಚೌಕೋನ,
* ಸರಳುಗಳು,
* ಮೂಲೆಗಂಬಗಳು
* ಬೇಲುಕಟ್ಟುಗಳು

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ರಣಜಿತ್ 16–11–51 ರಿಂದ

ಏಕ್ ನಜರ್ Ek Nazar

ತಾರಾಗಣ— ನಳಿನಿ ಜಯವಂತ್, ದೇಹನೂರ್, ಕರ್ದಿವಾರ್, ಗೋಪ್

ಮನಮೋಹಕ ಹಿಂದಿ ಚಿತ್ರ } ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 16–11–51 ರಿಂದ ಪ್ರಹಜ ಹಾರ್ (ಹಿಂದಿ)

ಉಡ್‌ಲ್ಯಾಂಡ್

ಜನಭರಿತ 2 ನೇ ವಾರ

ಏನಾ ಪಿಕ್ಚರ್ಸ್‌ರವರ

ಸಮನೋಹರ ಸಾಮಾಜಿಕ ಹಿಂದಿ ಚಿತ್ರ

ಗುಮಾಸ್ತ

Gumastha

ಪಾತ್ರ— ನಿಗಾರ್, ವಾಸ್ತಿ,
ಮಿರ್ಜಾ ಮುಷ್ರಾಫ್, ಕುಲದೀಪ್

ಪ್ರತಿ ದಿನ 3 ಪ್ರದರ್ಶನಗಳು

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

Edited, Printed and Published by Dharma Prachara Nirata M. S. Krishna Rao. at the Satyavadi Press Chamrajpuram Mysore